

# ಮೌನದಲ್ಲೇ ಪ್ರೇಮದ ಅಭಿವ್ಯಕ್ತಿ

■ ಗೌರಿ

ಪ್ರೀತಿ, ಸ್ನೇಹ, ನೋವು ಇವೆಲ್ಲವೂ ಮನುಷ್ಯನ ಮೂಲಭೂತ ಭಾವನೆಗಳು. ಅವು ಯಾವಾಗಲೂ ಹಂಚಿಕೊಳ್ಳಲು ಮತ್ತೊಂದು ಜೀವವನ್ನು, ಆಪ್ತ ಮನಸ್ಸನ್ನು ಬೇಡುವ ಭಾವಗಳು. ಇಡೀ ಮನುಕುಲವನ್ನು ಒಂದು ತಂತುವಿನಲ್ಲಿ ಬಂಧಿಸಿರುವುದೂ ಈ ಭಾವಗಳೇ.

ಜೀವಪ್ರಕೃತಿಯಲ್ಲಿ ಇವು ಮುಕ್ತವಾಗಿ ಅಭಿವ್ಯಕ್ತಿಗೊಳ್ಳಬಲ್ಲವು. ಆದರೆ ಪ್ರಕೃತಿಯಿಂದಲೇ ಹುಟ್ಟಿ, ಅದಕ್ಕಿಂತ ಭಿನ್ನವಾದ ಸಂಸ್ಕೃತಿಯನ್ನು ಕಟ್ಟಿಕೊಂಡಿರುವ ನಾಗರಿಕ ಸಮಾಜದಲ್ಲಿ ಈ ಭಾವಗಳ ಅಭಿವ್ಯಕ್ತಿಗೆ ಹಲವು ನಿರ್ಬಂಧಗಳಿವೆ. ಅಡೆತಡೆಗಳಿವೆ.

ಹರ್ಷ ಗುಪ್ತ ಅವರ 'ಥಾಟ್ಸ್' ಕಿರುಚಿತ್ರ ಈ ಸಂಗತಿಯನ್ನೇ ಸೂಕ್ಷ್ಮವಾಗಿಯೂ, ಸಾಧ್ಯವಿದ್ದಷ್ಟೂ ಸಾರ್ವತ್ರಿಕವಾಗಿಯೂ ತೋರಿಸಲು ಯತ್ನಿಸುತ್ತದೆ.

ದುಃಖದಿಂದ ಬೆಂಚಿನ ಮೇಲೆ ಕೂತಿದ್ದ ಓರ್ವ ಹುಡುಗಿಯ ದೃಶ್ಯದೊಂದಿಗೆ ಕಿರುಚಿತ್ರ ಆರಂಭವಾಗುತ್ತದೆ. ಅವಳ ಮನಸ್ಸು ಒಡೆದಿದೆ, ಪ್ರೇಮ ಭಗ್ನವಾಗಿದೆ. ಎಲ್ಲವನ್ನೂ ಕಳೆದುಕೊಂಡ, ತನ್ನ ಜೊತೆಗೆ ಯಾರೂ ಇಲ್ಲ ಎಂಬ ಭಾವದಲ್ಲಿ ಅವಳು ಹತಾಶಳಾಗಿ ಕೂತಿದ್ದಾಗ ಅದೇ ಬೆಂಚಿನ ಮೇಲೆ ಇನ್ನೊಂದು ಹುಡುಗಿ ಬಂದು ಕೂಡುತ್ತಾಳೆ. ಅವಳ ಮನಸಲ್ಲೂ ನೋವಿರುವುದನ್ನು ಕಣ್ಣೀರು ಸಾರಿಹೇಳುತ್ತಿದೆ.

ಆಕಸ್ಮಿಕವಾಗಿ ಆದ ಆ ಭೇಟಿ ಪರಿಚಯಕ್ಕೆ ತಿರುಗುತ್ತದೆ. ಇಬ್ಬರ ಮನಸ್ಸಿನಲ್ಲಿದ್ದ ನೋವಿನ ಎಳೆಯೇ ಅವರಿಬ್ಬರನ್ನೂ ಒಟ್ಟಿಗೇ ಸೇರಿಸುತ್ತದೆ. ಸುತ್ತಾಟ, ಕಾಫಿ, ಹರಟೆ ಎಲ್ಲವೂ ಅವರಿಬ್ಬರ ಸಂಬಂಧವನ್ನು ಇನ್ನಷ್ಟು ಗಾಢಗೊಳಿಸುತ್ತದೆ. ತಮ್ಮ ಮನಸ್ಸಿನ, ಬದುಕಿನ ವಿಷಯಗಳನ್ನೆಲ್ಲ ಅವರು ಹಂಚಿಕೊಳ್ಳುತ್ತಾರೆ. ಅವರಿಗೆ ಗೊತ್ತಿಲ್ಲದೇ ಅವರಿಬ್ಬರ ನಡುವೆ ಪ್ರೀತಿ ಹುಟ್ಟಿಕೊಳ್ಳುತ್ತದೆ. ಕೊನೆಗೆ ದೈಹಿಕವಾಗಿಯೂ ಅವರು ಸೇರುತ್ತಾರೆ.



**ಹೆಸರು:** ಥಾಟ್ಸ್
**ನಿರ್ದೇಶನ/ನಿರ್ಮಾಣ:** ಹರ್ಷ ಗುಪ್ತ
**ಛಾಯಾಗ್ರಹಣ:** ಎರೆನ್ ಡೆನಿಸ್
**ಸಂಕಲನ:** ರೋಹನ್ ಕೌಶಿಕ್
**ಸಂಗೀತ:** ಹರ್ಷಿತ್ ವರ್ಮಾ
**ತಾರಾಗಣ:** ಕಿರಾ ಗೋಡ್ಲೇ, ಗೇಬ್ರಿಯಲ್ ಬುಲ್ಕಾ

ಮನಸೊಳಗೆ ಹುಟ್ಟುವ ಪ್ರೀತಿಗೆ ಯಾವುದರ ಪರಿವೆಯೂ ಇರುವುದಿಲ್ಲ. ಅದು ತನ್ನಷ್ಟಕ್ಕೆ ತಾನು ಹುಟ್ಟಿ, ಹರಿಯುತ್ತದೆ. ಆದರೆ ಬುದ್ಧಿ ಸಮಾಜದ ಅಧೀನ. ಸುತ್ತಲಿನ ಸಮಾಜ ನಮ್ಮನ್ನು ಹೇಗೆ ನೋಡಬಹುದು ಎಂಬ ಭಯವನ್ನು ದಾಟಿಕೊಳ್ಳುವ ಶಕ್ತಿಯೂ ಪ್ರೀತಿಗೆ ಇರುತ್ತದೆ. ಆದರೆ ಈ ಕಿರುಚಿತ್ರದಲ್ಲಿ ಹಾಗಾಗುವುದಿಲ್ಲ. ಒಂದಾಗಿದ್ದ ಇಬ್ಬರೂ ಬೇರಾಗುತ್ತಾರೆ. ಮೊದಲಿಗೆ ಭಗ್ನಪ್ರೇಮದ ದುಃಖದಲ್ಲಿದ್ದ ಹುಡುಗಿ ತನ್ನ ಪ್ರಿಯಕರನಿಗೆ ಕರೆ ಮಾಡಿ, ಇವಳನ್ನು ಬಿಟ್ಟು ಅವನ ಜೊತೆಗೆ ಹೋಗುತ್ತಾಳೆ. ನೋವಿನ ಬಿಂದುವಿನಿಂದ ಆರಂಭವಾದ ಅವರ ಸಂಬಂಧ ಅದೇ ನೋವಿನ ಬಿಂದುವಿಗೆ ಬಂದು ಮುಗಿಯುತ್ತದೆ.

ಹನ್ನೊಂದು ನಿಮಿಷದ ಈ ಕಿರುಚಿತ್ರದಲ್ಲಿ ಕೊನೆಯಲ್ಲಿ ಬರುವ ಒಂದು ಮಾತನ್ನು ಬಿಟ್ಟರೆ ಬೇರೆ ಸಂಭಾಷಣೆಗಳೇ ಇಲ್ಲ. ನಡುವಲ್ಲಿ ಎರಡು ಮಾತುಗಳು ಬರುತ್ತವಾದರೂ ಅದು ಗಮನಕೊಟ್ಟು ಕೇಳದೇ ಹೋದರೆ ಗ್ರಹಿಸಲಾಗದಷ್ಟು ಅಸ್ಪಷ್ಟವಾಗಿದೆ. ಅದನ್ನು ನಿರ್ದೇಶಕರು ಉದ್ದೇಶಪೂರ್ವಕವಾಗಿಯೇ ಮಾಡಿದ್ದಾರೆ.

ಆಡುವ ಒಂದೊಂದು ಮಾತೂ ಆ ಪಾತ್ರಗಳ ಕಥೆಯನ್ನು, ಹಿನ್ನೆಲೆಯನ್ನು ಒಂದು ಚೌಕಟ್ಟಿನೊಳಗೆ ಕೂಡಿಸಿ, ಸ್ಪಷ್ಟಗೊಳಿಸುತ್ತ ಹೋಗುತ್ತಿದ್ದವು. ಆದರೆ ಮಾತಿನಾಚೆಯ ಸಂಗೀತ ಅದಕ್ಕೊಂದು ಸಾರ್ವತ್ರಿಕ ಗುಣವನ್ನು ಕಲ್ಪಿಸಿದೆ. ತಾಂತ್ರಿಕವಾಗಿಯೂ ಚಿತ್ರ ಅಚ್ಚುಕಟ್ಟಾಗಿದೆ.

ಆದರೆ ಆಶಯವನ್ನು ಗಮನಿಸಿದರೆ, ಕಿರುಚಿತ್ರದ ಮೂಲಕ ನಿರ್ದೇಶಕರು, ಸಲಿಂಗಿಗಳು ಒಟ್ಟಾಗಿ, ಗೌರವಯುತವಾಗಿ ಬದುಕಲು ಸಾಧ್ಯವಿಲ್ಲ ಎಂಬುದನ್ನು ಹೇಳಲು ಹೊರಟಿದ್ದಾರೆಯೇ ಎಂಬ ಸಂಶಯ ಕಾಡದಿರದು. ಸಲಿಂಗಿಗಳ ಬಗೆಗಿನ ಜನರ ದೃಷ್ಟಿ ಈಗಲೂ ಸಾಂಪ್ರದಾಯಿಕವೇ ಆಗಿದೆ ಎನ್ನುವುದು ನಿಜವಾದರೂ, ಅದನ್ನು ಕಲೆಯಲ್ಲಿಯೇ ಅಲ್ಲವೇ ಮೊದಲು ಮೀರಬೇಕಾಗಿರುವುದು? 'ಸಮಾಜ ಒಪ್ಪುವುದಿಲ್ಲ' ಎಂಬ ಮಾತನ್ನು ಮುರಿದೇ ಅಲ್ಲವೇ ಎಲ್ಲ ಬದಲಾವಣೆಗಳು ಸಂಭವಿಸುವುದು? ಈ ಪ್ರಶ್ನೆಗಳ ಕಿರುಚಿತ್ರದ ರಚನೆಯ ಹಿಂದಿರುವ ಆಲೋಚನೆಗಳ ಕುರಿತು ಅನುಮಾನ ಹುಟ್ಟುವಂತೆ ಮಾಡುತ್ತವೆ.

ಈ ಕಿರುಚಿತ್ರ ವೀಕ್ಷಣೆಗೆ bit.ly/2V4NLZo ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.